೩) ಈ ಯೋಜನೆಯಿಂದ ಪ್ರಯೋಜನ ಪಡೆಯತಕ್ಕ ಜಿಲ್ಲೆಗಳು ಮತ್ತು ತಾಲ್ಲೂಕುವಾರು ವಿವರಗಳು ಈ ರೀತಿ ಇವೆ :—

| ಜಿಲ್ಲೆ | ತಾಲ್ಲೂಕು | ನೀರಾವರಿ ಆಗತಕ್ಕ ಪ್ರದೇಶ (ಎಕರೆಗಳಲ್ಲಿ) |
|---|---|---|
| ೧. ಬಿಜಾಪುರ | ಬಾಗೇವಾಡಿ | ೨,೦೮೦ |
| | ಇಂಡಿ | ೯೧,೦೦೦ |
| | ಮುದ್ದೇಬಿಹಾಳ್ | ೩೭,೯೨೦ |
| | ಸಿಂದಗಿ | ೨,೦೬,೦೦೦ |
| | ಬಿಜಾಪುರ ಜಿಲ್ಲೆ ಒಟ್ಟು | ೩,೩೭,೦೦೦ ಎಕರೆ. |
| ೨. ಗುಲ್ಬರ್ಗಾ | ಜೇವರ್ಗಿ | ೨,೫೩,೦೦೦ |
| | ಶಹಾಪುರ | ೨,೩೦,೦೨೦ |
| | ಸೋರಾಪುರ | ೨,೩೦,೦೦೦ |
| | ಗುಲ್ಬರ್ಗಾ ಜಿಲ್ಲೆ ಒಟ್ಟು | ೭,೧೩,೦೦೦ ಎಕರೆ, |

ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟ ಒಟ್ಟು ೧೦,೫೦,೦೦೦ ಎಕರೆ.

## ಜಮಖಂಡಿ ತಾಲ್ಲೂಕ್ ಸಾವಳಗಿಯಲ್ಲಿ ಕೆರೆಯ ನಿರ್ಮಾಣ

೧೪೨೦. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).—ಮಾನ್ಯ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬರಗಾಲ ಪೀಡಿತ ಪ್ರದೇಶವಾದ ಜಮಖಂಡಿ ತಾಲ್ಲೂಕಿನ ಸಾವಳಗಿಯಲ್ಲಿ ನೀರಾವರಿ ಕೆರೆ ನಿರ್ಮಿಸುವ ಯೋಜನೆಗೆ ಸರ್ಕಾರದವರ ಮಂಜೂರಾತಿ ದೊರಕಿದೆಯೆ,

ಆ) ಈ ಬರಗಾಲ ಬವಣೆಯನ್ನು ಅನೇಕ ವರ್ಷಗಳಿಂದ ಅನುಭವಿಸುತ್ತಿದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

೩) ಈ ಭಾಗದ ಜನರಿಗೆ ಈ ಕೆರೆಯ ಅವಶ್ಯಕತೆ ಇದ್ದುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಈ ಕೆರೆಯ ಕೆಲಸವನ್ನು ಎಂದು ಪ್ರಾರಂಭಿಸುವುದು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಯು ಆರ್ಥಿಕವಾಗಿ ಅಸೂಕ್ತವಾಗಿರುವುದರಿಂದ ಮಂಜೂರಾಗಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

೩) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ,

## ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆಯಾಗುವ ಪ್ರದೇಶ

೧೪೨೧. ಶ್ರೀ ಜಿ. ಎಸ್. ಬಾಗಲಕೋಟೆ (ಜಮಖಂಡಿ).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕೃಷ್ಣಾ ಮೇಲ್ದಂಡೆ ಯೋಜನೆ ಕೆಳಗೆ ಮುಳುಗಡೆ ಆಗುವ ಒಟ್ಟು ಕ್ಷೇತ್ರ ಎಷ್ಟು?

ಆ) ಆಯಾ ತಾಲ್ಲೂಕಿನಲ್ಲಿ ಮುಳುಗಡೆ ಆಗುವ ಕ್ಷೇತ್ರ ಎಷ್ಟು? (ತಾಲ್ಲೂಕುವಾರು ವಿವರ ಕೊಡುವುದು)

ಇ) ಈ ಯೋಜನೆಯಲ್ಲಿ ಈಗಾಗಲೇ ಮುಳುಗಡೆಯಾದ ಜಮೀನಿನ ವಿಸ್ತೀರ್ಣವೆಷ್ಟು? (ತಾಲ್ಲೂಕುವಾರು ವಿವರ ಒದಗಿಸುವುದು)

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದಲ್ಲಿ ಮುಳುಗಡೆಯಾಗುವ ಕ್ಷೇತ್ರದ ವಿವರಗಳು ಈ ರೀತಿ ಇವೆ,

| | ಎಕರೆ | ಗುಂಟೆ |
|---|---|---|
| ಆಲಮಟ್ಟಿ ಜಲಾಶಯದಲ್ಲಿ (೧೬೮೦ ಅಡಿ ಮಟ್ಟದಲ್ಲಿ) ಮುಳುಗಡೆಯಾಗುವ ಕ್ಷೇತ್ರ | ೩೮,೨೧೨ | — ೧೯ |
| ನಾರಾಯಣಪುರ ಜಲಾಶಯದಲ್ಲಿ ಮುಳುಗಡೆಯಾಗುವ ಕ್ಷೇತ್ರ | ೨೭,೬೯೬ | — ೩೦ |
| ಒಟ್ಟು ಕ್ಷೇತ್ರ | ೬೫,೯೦೯ | — ೦೯ |

ಆ) ತಾಲ್ಲೂಕುವಾರು ಮುಳುಗಡೆಯಾಗುವ ಕ್ಷೇತ್ರದ ವಿವರ ಕೆಳಕಂಡಂತೆ ಇದೆ.

| ಆಲಮಟ್ಟಿ ಜಲಾಶಯ | ತಾಲ್ಲೂಕು | ಮುಳುಗಡೆಯಾಗುವ ಕ್ಷೇತ್ರ | |
|---|---|---|---|
| | | ಎಕರೆ | ಗುಂಟೆ |
| | ೧) ಬಸವನಬಾಗೇವಾಡಿ | ೯,೭೯೯ | — ೧೭ |
| | ೨) ಬಾಗಲಕೋಟೆ | ೧೨,೧೧೨ | — ೩೭ |
| | ೩) ಬೀಳಗಿ | ೧೫,೨೩೫ | — ೨೪ |
| | ೪) ಬಿಜಾಪುರ | ೧,೦೬೪ | — ೨೧ |
| | ಒಟ್ಟು | ೩೮,೨೧೨ | — ೧೯ |

| ನಾರಾಯಣಪುರ ಜಲಾಶಯ : | ತಾಲ್ಲೂಕು | ಮುಳುಗಡೆಯಾಗುವ ಕ್ಷೇತ್ರ |
|---|---|---|
| | | ಎಕರೆ ಗುಂಟೆ |
| | ೧. ಹುನಗುಂದ | ೯,೩೫೯–೦೩ |
| | ೨. ಬಾಗಲಕೋಟೆ | ೬೫೯–೩೦ |
| | ೩. ಮುದ್ದೇಬಿಹಾಳ | ೧೦,೨೧೯–೧೧ |
| | ೪. ಶೋರಾಪುರ | ೫೪–೦೦ |
| | ೫. ಲಿಂಗಸೂಗೂರ್ | ೭,೪೧೫–೦೭ |
| | | ೨೭,೬೯೬–೩೦ |

೩) ಈಗ ಸದ್ಯಕ್ಕೆ ಆಲಮಟ್ಟಿ ಜಲಾಶಯದಲ್ಲಿ ನೀರು ಶೇಖರಣೆ ಮಾಡಿಲ್ಲವಾಹ್ದರಿಂದ ಈ ಜಲಾಶಯ ದಿಂದಾಗಿ ಈವರೆಗೆ ಯಾವ ಜಮೀನು ಮುಂಳಗಡೆಯಾಗಿಲ್ಲ.

ನಾರಾಯಣಪುರ ಜಲಾಶಯದಲ್ಲಿ ಸದ್ಯಕ್ಕೆ ಸಂಗ್ರಹಿಸಿದ ನೀರಿನ ಮಟ್ಟವು ೪೮೬.೧೦ ಮೀಟರ್ ಇದ್ದು, ೧೮,೬೯೫ ಎಕರೆಯಷ್ಟು ಜಮೀನು ಮುಂಳುಗಡೆಯಾಗಿದೆ. ಮುಳುಗಡೆಯಾದ ಜಮೀನಿನ ತಾಲ್ಲೂಕುವಾರು ವಿವರಗಳು ಕೆಳಕಂಡಂತಿವೆ.

| | ತಾಲ್ಲೂಕು | ಎಕರೆ ಗುಂಟೆ |
|---|---|---|
| ೧) | ಹುನುಗುಂದ | ೬,೭೪೪–೦೫ |
| ೨) | ಮುದ್ದೇಬಿಹಾಳ | ೬,೪೯೧–೧೪ |
| ೩) | ಶೋರಾಪುರ | ೫೪–೦೦ |
| ೪) | ಲಿಂಗಸುಗೂರ್ | ೫,೦೦೫–೨೧ |
| | ಒಟ್ಟು | ೧೮,೬೯೫–೦೦ |

## ಬಿಜಾಪುರ ಜಿಲ್ಲೆಯಲ್ಲಿ ನೀರಾವರಿಗೊಳಪಡಿಸಿದ ಪ್ರದೇಶದ ವಿಸ್ತೀರ್ಣ

೯೮೩. ಶ್ರೀ ಜಿ. ಎಸ್. ಬಾಗಲಕೋಟ್ (ಜಮಖಂಡಿ).–ಮಾನ್ಯ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇಲ್ಲಿಯವರೆಗೆ ನೀರಾವರಿಗೊಳಪಡಿಸಿದ ಪ್ರದೇಶದ ವಿಸ್ತೀರ್ಣ ಎಷ್ಟು?

ಆ) ವಿಜಾಪುರ ಜಿಲ್ಲೆಯಲ್ಲಿ ನೀರಾವರಿಗೊಳಪಟ್ಟ ಪ್ರದೇಶದ ವಿಸ್ತೀರ್ಣವೆಷ್ಟು?

ಇ) ಈ ಜಿಲ್ಲೆಯಲ್ಲಿ ಹರಿಯುತ್ತಿರುವ ಐದು ನದಿಗಳಿಗೆ ಅಲ್ಲಲ್ಲಿ ಬಾಂಧಾರ ಕಟ್ಟಿ ಏತ ನೀರಾವರಿ–ಗೊಳಿಸಿದಲ್ಲಿ ಜಿಲ್ಲೆಯ ಲಕ್ಷಾನುಗಟ್ಟಲೆ ಬರಡು ಭೂಮಿಗೆ ನೀರುಣಿಸಬಹುದೆಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ಏನು ಕ್ರಮ ಕೈಕೊಂಡಿದ್ದಾರೆ?

ಶ್ರೀ ಹೆಚ್. ಡಿ. ದೇವೇಗೌಡ– (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)

ಅ) ೨೧.೮೦ ಲಕ್ಷ ಹೆಕ್ಟೇರುಗಳು

ಆ) ೧.೮೨ ಲಕ್ಷ ಹೆಕ್ಟೇರುಗಳು

ಇ) ಸಲಹೆ ಪರಿಶೀಲನೆಯಲ್ಲಿದೆ.

ಈ) ಸಂಪನ್ಮೂಲಗಳ ಲಭ್ಯತೆಯನ್ನು ಅವಲಂಬಿಸಿ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಯೋಜನೆಗಳು ಆರ್ಥಿಕವಾಗಿ ಮತ್ತು ತಾಂತ್ರಿಕವಾಗಿ ಶಕ್ಯವಾಗಿದ್ದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

## ಸಣ್ಣ ಉಳಿತಾಯ ಯೋಜನೆ

೯೯೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ)–, ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಣ್ಣ ಉಳಿತಾಯ ಯೋಜನೆಯಲ್ಲಿ ಕಳೆದ ೫ ವರ್ಷಗಳಲ್ಲಿ ಪ್ರತಿ ವರ್ಷ ಸಂಗ್ರಹಿಸಿರುವ ಹಣದ ವಿವರವೆಷ್ಟು? ಹಾಗೂ ಭಾರತದಲ್ಲಿ ಆ ಬಗ್ಗೆ ರಾಜ್ಯದ ಸ್ಥಾನವೇನು?

ಆ) ಈ ಉಳಿತಾಯ ಸಂಗ್ರಹಣೆಯಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು?

ಇ) ಈ ಯೋಜನೆಯನ್ನು ಹೆಚ್ಚು ವ್ಯಾಪಕಗೊಳಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?